**ಅಸಲು ದಾವಾ ನಂಃ 117/2022**
**ಡಿ.ಡಬ್ಲ್ಯೂಃ 1,**

**<u>ದಿನಾಂಕ :07-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟಿ ಸವಾಲು :- ಶ್ರೀಮತಿ. ಎಮ್. ವಿ. ಎಲ್. ವಾದಿ ಪರ ವಕೀಲರಿಂದ :</u>**

ನಾನು 7ನೇ ತರಗತಿ ತನಕ ಓದಿರುತ್ತೇನೆ. ನಾನು ನಮ್ಮ ಜಮೀನಿನಲ್ಲಿ ಕೆಲಸ ಬಿಟ್ಟು ರಾಜೇಶ್ರೀ ಸಿಮೆಂಟ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. ರಾಜೇಶ್ರೀ ಸಿಮೆಂಟ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲಾ . ಆದರೆ ನಾನು ಕೂಲಿ ಎಂದು ಕೆಲಸ ಮಾಡುತ್ತಿದ್ದೆ. ನನ್ನ ತಾಯಿ 2020 ರಲ್ಲಿ ತೀರಿ ಹೋಗಿದ್ದಾರೆ. ನನ್ನ ತಂದೆ ಖಾಸಿಮಸಾಬ 2002 ರಲ್ಲಿ ತೀರಿ ಹೋಗಿದ್ದಾರೆ. ನಮ್ಮತಂದೆ-ತಾಯಿಗೆ 2 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇದ್ದರು ಎಂದರೆ ಸರಿ. ನಮ್ಮ ತಾಯಿ ಜೀವಂತ ಇರುವರೆರೆಗೆ ದಿಗ್ಗಾಂವದ ಒಂದೇ ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸರಿ. ನಮ್ಮ ತಾಯಿಗೆ ಸ.ನ. 86/4, 87/3 ಮತ್ತು 318 ಈ ಜಮೀನುಗಳು ಅವರ ತಂದೆ ಅಬ್ಬಾಸ ಅಲಿ ಇವರಿಂದ ಬಂದಿರುತ್ತಾರೆ ಎಂದರೆ ಸರಿ. ಸದರಿ ಮೂರು ಸರ್ವೆ ನಂಬರ ಜಮೀನುಗಳ ಆಧಾಯದಿಂದ ನಮ್ಮ ತಂದೆ ನಮ್ಮ ಕುಟುಂಬ ನಿರ್ವಣೆ ಮತ್ತು ನಮ್ಮನ್ನು ಲಾಲನೆ ಪೋಷಣೆ ಮಾಡಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ಮುಂಬೈಗೆ ಹೋಗಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ನಮ್ಮನ್ನು ಮತ್ತು ನಮ್ಮ ತಾಯಿಯನ್ನು ಬಿಟ್ಟು ಮುಂಬೈಗೆ ಹೋಗಿದ್ದರು ನಂತರ ನಮ್ಮನ್ನು ಕರೆಸಿಕೊಂಡರು. ನಾನು 4 ನೇ ತರಗತಿ ಇದ್ದಾಗ ನಮ್ಮ ತಂದೆ ಮುಂಬೈಗೆ ಹೋಗಿದ್ದಾರೆ. ನನಗೆ ಅಣ್ಣ ಮತ್ತು ತಂಗಿ ಇದ್ದಾರೆ. ಮುಂಬೈಯಲ್ಲಿ ನನ್ನ ತಂದೆ ವಾಚಮೆನ್ ಕೆಲಸ ಮಾಡುತ್ತಿದ್ದರು. 1992 ರಲ್ಲಿ ಸ.ನ. 939 ಕ್ಷೇತ್ರ 4 ಎಕರೆ 27 ಗುಂಟೆ ದಾವಾ ಆಸ್ತಿ ಜಿ ಮತ್ತು ಎಚ್ ಇವುಗಳನ್ನು ನನ್ನ ತಂದೆ ಖರಿದಿಸಿದ್ದಾರೆ ಎಂದರೆ ಸಾಕ್ಷಿ ನಾನು, ನನ್ನ ಸಹೋದರ ನಮ್ಮ ಅತ್ತಿಗೆ ರಾಜೇಶ್ರೀ ಸಿಮೆಂಟ ಕಾರ್ಖಾನೆಯಲ್ಲಿ ಕೂಲಿ ಕೆಲಸ ಮಾಡಿ ಖರಿದಿಸಿದ್ದೇವೆ ಎಂದು

ನುಡಿಯುತ್ತಾರೆ. 1992 ರಲ್ಲಿ ದಿನಕ್ಕೆ ರೂ.60 ರಿಂದ 80 ದಿನಗೂಲಿ ಇತ್ತು. ದಾವಾ ಆಸ್ತಿಗಳನ್ನು ನಮ್ಮ ತಂದೆ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅವರು ಮುಂಬೈನಲ್ಲಿ ವಾಸ ಇದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಮುಂಬೈಯಲ್ಲಿ ತೀರಿ ಹೋಗಿದ್ದಾರೆ. ನಮ್ಮ ತಾಯಿಗೆ ಸ.ನ. 86/4, 87/3 ಮತ್ತು 318 ಬಂದ ಜಮೀನುಗಳ ಆದಾಯದಿಂದ ದಾವಾ ಆಸ್ತಿ ಜಿ ಮತ್ತು ಎಚ್ ಖರಿದಿಸಿದ್ದೇವೆ ಎಂದರೆ ಸರಿಯಲ್ಲ.

ರಾಜೇಶ್ರೀ ಸಿಮೆಂಟ ಕಾರ್ಖಾನೆಯವರು ದಿ: 10-03-2010 ರಲ್ಲಿ ಸ.ನ. 318 ಖರಿದಿಸಿದ್ದರು ಎಂದರೆ ಸರಿ. ಅದರಿಂದ ನಮ್ಮ ತಾಯಿ ಖಾತೆಗೆ ರೂ. 31,15,000/- ಹಣ ಜಮೆ ಆಯಿತು ಎಂದರೆ ಸರಿ. ನಮ್ಮ ತಾಯಿಯ ಬ್ಯಾಂಕ ಖಾತೆ ಚಿತ್ತಾಪೂರದಲ್ಲಿ ಇತ್ತು. ಸ.ನ. 811/3 ಜಮೀನನ್ನು ದಿ: 23- 07-2010 ರಂದು ಅದರ ಆದಾಯದಿಂದ ಖರಿದಿಸಲಾಯಿತು ಎಂದರೆ ಸರಿಯಲ್ಲ. ಅದೇ ದಿನ ಸ.ನ. 811/2 ನನ್ನ ಸಹೋದರ ಮಗನಾದ 3ನೇ ಪ್ರತಿವಾದಿ ಹೆಸರಿನಲ್ಲಿ ಖರಿದಿಸಲಾಯಿತು ಎಂದರೆ ಸರಿಯಲ್ಲ . ಆ ಸಮಯದಲ್ಲಿ 3ನೇ ಪ್ರತಿವಾದಿಗೆ 20 ವರ್ಷ ಮಾತ್ರ ಇತ್ತು ಎಂದರೆ ಸರಿ. ಸ.ನ. 86/4, ಓರಿಯಂಟ ಕಂಪನಿಯವರು ದಿ: 27-04-2015 ರಂದು ರೂ. 18,20,000/- ಗೆ ಖರಿದಿಸಿದ್ದರು ಎಂದರೆ ಸರಿ. ಅದೇ ದಿನ ಸ.ನ. 87/3 ಓರಿಯಂಟ ಕಂಪನಿಯವರು ದಿ: 27-04-2015 ರಂದು ರೂ. 65,80,000/- ಗೆ ಖರಿದಿಸಿದ್ದರು ಎಂದರೆ ಸರಿ. ಸದರಿ ಬಂದ ಹಣ ದಿಂದ ದಾವಾ ಆಸ್ತಿ ಎ ಮತ್ತು ಬಿ ನಮ್ಮ ತಾಯಿ ಹೆಸರಿಗೆ ಖರಿದಿಸಿದ್ದರು ಎಂದರೆ ಸರಿ. ಅದೇ ರೀತಿ ದಾವಾ ಆಸ್ತಿ ಇ ಮತ್ತು ಎಫ್ ಶುಕ್ರಾಬೀ ಇವರ ತಮ್ಮ ಹೆಸರಿಗೆ ಖರಿದಿಸಿದ್ದರು ಎಂದರ ಸರಿ. ನಮ್ಮ ತಾಯಿ ತೀರಿ ಹೋದಾಗ ಅವರ ಬ್ಯಾಂಕ ಖಾತೆಯಲ್ಲಿ ಇದ್ದ ಹಣ ಏನಾಯಿತು ಎಂದು ಗೊತ್ತಿಲ್ಲಾ. ನಮ್ಮ ತಾಯಿ ತೀರಿ ಹೋದ ನಂತರ ದಿ: 15-09-2024 ರಂದು ಪಾಲು ಪತ್ರ ಮಾಡಿಕೊಂಡಿದ್ದೇವೆ

ಎಂದರೆ ಸರಿ. ನಿಡಿ-6 ಆಗುವಾಗ ನಮ್ಮ ಸಹೋದರಿಯನ್ನು ಕರೆದಿದ್ದೇವೆ ಆದರೆ ಬರಲಿಲ್ಲಾ. ನಿಡಿ-6 ರ ಬರೆಯುವ ತನಕ ನಾವು ಎಲ್ಲರೂ ಜಂಟಿ ಆಗಿದ್ದು ಎಲ್ಲಾ ಜಮೀನುಗಳು ಜಂಟಿ ಆಗಿವೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮತ್ತು ನನ್ನ ಅಣ್ಣ ಜಂಟಿ ಆಗಿದ್ದೆವು ಎಂದು ನುಡಿಯುತ್ತಾರೆ. ಪಾಲು ಆಗವುಕ್ಕಿಂತ ಮುಂಚೆ ಯಾವುದಾರೂ ಪಾಲು ಆಗಿದೆ ಎಂದರೆ ಸಾಕ್ಷಿ ನಮ್ಮ ತಾಯಿ ಇದ್ದಾಗ ಅವರಿಗೆ ಸ.ನ. 125 ಕೊಟ್ಟು ಆ ಪ್ರಕಾರ ಮುಟೇಶನ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಾಯಿ ಮೌಖಿಕ ಕುಟುಂಬ ನಿರ್ವಹಣೆ ಮೂರು ಸ.ನ.ಗಳನ್ನು ಮಾತ್ರ ಮಾಡಿದ್ದರು. ನಮ್ಮ ತಾಯಿ ಯಾವಾಗ ಮೌಖಿಕ ಕುಟುಂಬ ನಿರ್ವಹಣೆ ಮಾಡಿದ್ದಾರೆ ಎಂದು ದಿನಾಂಕ ಗೊತ್ತಿಲ್ಲಾ. ಸ.ನ. 125 ನ್ನು ವಾದಿ ಹೆಸರಿಗೆ ಮಾಡಿದ್ದು ಅವರಿಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಸ.ನ. 125 ನ್ನು ನಾವೇ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸ.ನ. 125 ನಮ್ಮ ತಾಯಿ ತವರು ಮನೆಯಿಂದ ಬಂದಿರುವ ಆಸ್ತಿ ಎಂದರೆ ಸರಿ. ನಮ್ಮ ತಾಯಿ ಸ.ನ. 125 ವಾದಿಗೆ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**( ಈ ಹಂತದಲ್ಲಿ ಹೆಚ್ಚಿನ ಪಾಟಿ ಸವಾಲಿಗಾಗಿ ವಾದಿ ಪರ ವಕೀಲರು ಸಮಯ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**